ಸಾಧ್ಯತೆಗಳನ್ನು ತೆರೆದಿಟ್ಟಿತು. ಅವನ ದನಕರುಗಳೀಗ ಯಾವ ತಡೆಯೂ ಇಲ್ಲದೆ ಮೇಷ್ಟ್ರ ತೋಟಕ್ಕೆ ನುಗ್ಗತೊಡಗಿದವು. ಹಾಗಾಗದಂತೆ ಕಟ್ಟಿದ ಐಬೆಕ್ಸ್ ಬೇಲಿಯ ತಂತಿಗಳು ಒಂದೊಂದಾಗಿ ತುಂಡಾಗಿದ್ದು ತನ್ನಷ್ಟಕ್ಕೇ ಆದ ಘಟನೆಗಳಲ್ಲ ಎನ್ನುವುದು ಗೊತ್ತಾದರೂ ಮೇಷ್ಟರೇನೂ ಮಾಡುವಂತಿರಲಿಲ್ಲ. ತೋಟದ ಅಂಚುಗಳೆಲ್ಲ ಯಾರೋ ತುದಿಗೆ ಕಾಲಿಟ್ಟು ಮೀಟಿದಂತೆ ಆಗಾಗ ಕುಸಿದು ಬೀಳುತ್ತಿದ್ದವು. ಜೀವವಿರುವ, ಕದಲುವ ಯಾವುದೇ ಪ್ರಜಾತಿ ಕಂಡರೂ ಕಾದಾಟಕ್ಕಿಳಿಯುವುದು ಪ್ರಾಣಿಗಳ ಮೂಲ ಗುಣ. ನಾಗರಿಕತೆಯ ದಾರಿಯಲ್ಲಿ ಸಾವಿರಾರು ವರ್ಷ ಮುಂದೆ ಬಂದರೂ ಆ ಮೃಗೀಯ ಸ್ವಭಾವದಿಂದ ಪಾರಾಗುವುದು ಮನುಷ್ಯನಿಗಿನ್ನೂ ಸಾಧ್ಯವಾಗಿಲ್ಲ. ಬದಲಿಗೆ ಇನ್ನೊಬ್ಬರನ್ನು ಘಾಸಿಗೊಳಿಸುವ ಹಲವಾರು ಹೊಸ ವಿಧಾನಗಳನ್ನವನು ಕಂಡುಕೊಂಡಿದ್ದಾನೆ. ಇನ್ನೊಬ್ಬರ ಮೇಲೆ ಯಾವುದೇ ವಿಧದಲ್ಲಿ ದಾಳಿ ಮಾಡಬಹುದಾದ ನೆಪಗಳಿಗಾಗಿ ಅವನು ಕಾಯುತ್ತಲೇ ಇರುತ್ತಾನೆ ಎಂದುಕೊಂಡರು ಮೇಷ್ಟ್ರು.

ತೋಟಕ್ಕೆ, ಮನೆಗೆ ಹಾಗೂ ಮನಸ್ಸಿಗೆ ಋತುರಾಜ ಕೊಡತೊಡಗಿದ ಅಗಣಿತ ಸಮಸ್ಯೆಗಳ ಪೈಕಿ ಒಂದಕ್ಕೂ ಜೀತುವಿನ ಬಳಿ ಉತ್ತರವಿರಲಿಲ್ಲ. ದೊಡ್ಡ ಬಾಯಿ, ಗಟ್ಟಿ ತೋಳು ಹಾಗೂ ಕೊಂಚ ಪ್ರಭಾವ... ಇವುಗಳ ಎದುರು ಮನುಷ್ಯನ ಇನ್ನುಳಿದ ಗುಣಗಳೆಲ್ಲವೂ ಗೌಣವಾಗಿಬಿಡುತ್ತವೆಂಬುದು ಅರಿವಾದ ದಿನ ಅವನು ಈ ಸಮಸ್ಯೆಗೆ ಕಟ್ಟಕಡೆಯ ಪರಿಹಾರವೊಂದನ್ನು ಕಂಡುಕೊಂಡ. ಜಮೀನನ್ನು ಮಾರಲು ನಿರ್ಧರಿಸಿದ. ಅಪ್ಪನಿಗೆ ಹುಷಾರಿಲ್ಲ. ಅಮ್ಮನಿಗೂ ಸಾಕಾಗಿದೆ. ಅವರು ನಿಶ್ಶಕ್ತ, ನಿರಾಶಾದಾಯಕ ಹೆಜ್ಜೆಗಳನ್ನಿಡುತ್ತ ನಡೆಯುತ್ತಿರುವ ಹಾದಿಯ ಈಚೆ ತುದಿಯಲ್ಲಿರುವುದು ಬೆಂಗಳೂರಿನ ತನ್ನ ಮನೆಯೊಂದೇ. ಅವರಿದ್ದಾಗಲೇ ಇಷ್ಟೆಲ್ಲ ಹಾರಾಡುವ ಋತುರಾಜ ಯಾರೂ ಇಲ್ಲದಾಗ ಏನೇನು ಮಾಡುವನೋ? ಇದನ್ನೆಲ್ಲ ಯೋಚಿಸಿದ ಜೀತು ಒಂದು ದೊಡ್ಡ ಪರಾಜಯದ ಮೂಲಕ ಈ ಸೋಲುಗಳ ಸರಣಿಯನ್ನು ಕೊನೆಗೊಳಿಸಲು ನಿರ್ಧರಿಸಿದ. ಇದು ತನ್ನ ಇಷ್ಟು ದಿನದ ಎಲ್ಲ ಸೋಲುಗಳ ಪೈಕಿ ಕೊನೆಯದು.

ಹಾಗೆಯೇ ಮೊದಲ ಗೆಲುವೂ ಹೌದು!

* * *

